

# ನೀಲವರ್ಣದ ಶಂಖಪುಷ್ಪ



**ಶಂಖಪುಷ್ಪ ಹೂವು ನೋಡಲು ಸುಂದರ, ಆಕರ್ಷಕ ಜತೆಗೆ ಆರೋಗ್ಯ ವರ್ಧಕವೂ ಕೂಡ.**

**■ ಸುಮನಾ ಜಿ. ಪ್ರಸಾದ್**

ಮನೆಯ ಹಿತ್ತಲಿನಲ್ಲಿ ನಂದಿ ಬಟ್ಟಲು ಗಿಡ ಇತ್ತು. ಅದರ ತುಂಬ ಹಾಲು ಬಣ್ಣದ ಹೂಗಳು. ಒಂದು ಬಳ್ಳಿ ಈ ಗಿಡದ ಮೇಲೆ ಹಬ್ಬುತ್ತಿತ್ತು. ಹಚ್ಚಹಸುರಾದ ಬಳ್ಳಿ. ಅದರ ತುಂಬ ಕಡು ನೀಲವರ್ಣದ ಶಂಖಾಕೃತಿಯ ಹೂಗಳು. ಆಹಾ ಎಷ್ಟು ಸುಂದರವಾಗಿದೆ ಈ ಹೂವು ಎಂದು ಮನದಲ್ಲೇ ಅಂದುಕೊಂಡು ನಾಲ್ಕು ದಿನದಲ್ಲಿ ಒಂದಲ್ಲ .. ಎರಡಲ್ಲ.. ಹತ್ತಾರು ಹೂಗಳು ಬಳ್ಳಿ ತುಂಬ ನಸು ನಗುತ್ತಿದ್ದವು. ಅಚ್ಚ ಬಿಳಿಯ ನಂದಿಬಟ್ಟಲ ಜೊತೆಗೆ ಕಡು ನೀಲಿಯ ಶಂಖಪುಷ್ಪ ನಿತ್ಯವೂ ಅರಳುತ್ತಾ ಜುಗಲ್‌ಬಂದಿ ಹಾಡುತ್ತಿದ್ದವು.

ಆಕಾರದಲ್ಲಿ ಶಂಖವನ್ನೇ ಹೋಲುವ ಶಂಖಪುಷ್ಪ, ಮನೆಯಂಗಳದಲ್ಲಿ ಸುಲಭವಾಗಿ ಬೆಳೆಯುವ ಹೂವು. ಅಪಾರ ಔಷಧೀಯ ಗುಣಗಳ ಕಣಜವನ್ನೇ ಹೊಂದಿದೆ. ಇದರಲ್ಲಿ ಬಿಳಿ ಬಣ್ಣದ್ದೂ ಇದೆ, ನಸು ನೇರಳೆ ಬಣ್ಣದ್ದೂ ಇದೆ. ಈ ಹೂಗಳನ್ನು ದೇವರ ಪೂಜೆಗೂ ಬಳಸಬಹುದು, ಮನೆಮದ್ದಾಗಿಯೂ ಉಪಯೋಗಿಸಬಹುದು, ಹೆಚ್ಚಿನ ಶ್ರಮವಿಲ್ಲದೆ ಎಲ್ಲರೂ ಮನೆಯಂಗಳದಲ್ಲಿ ಬೆಳೆಯಬಹುದು.

ಶಂಖಪುಷ್ಪ ಹೂವು ನೋಡಲು ಸುಂದರ, ಆಕರ್ಷಕ ಜತೆಗೆ ಆರೋಗ್ಯ ವರ್ಧಕವೂ ಕೂಡ. ಸಾಮಾನ್ಯವಾಗಿ ಶಂಖಪುಷ್ಪ ಬಳ್ಳಿ ಬೇರೆ ಸಸ್ಯವನ್ನು ಇಲ್ಲವೇ ಕಂಬವನ್ನು ಆಧಾರವಾಗಿರಿಸಿಕೊಂಡು ಬೆಳೆಯುತ್ತದೆ. ದಟ್ಟ ಬಣ್ಣದಿಂದ ಕೂಡಿದ ಹೂವಿನ ದಳಗಳು ಶಂಖದ ಒಳಭಾಗದ ಆಕಾರವನ್ನು ಹೊಂದಿದೆ. ತೆಳ್ಳಗಿನ ಒಂದೇ ದಳದ ಮಧ್ಯೆ ಸಣ್ಣದೊಂದು ದಳ ಸೇರಿ ಹೂವಿನ ಅಂದವನ್ನು ಇಮ್ಮಡಿಸಿದೆ.

ಬಳ್ಳಿ ವರ್ಷವಿಡೀ ಹೂವು ಬಿಡುತ್ತದೆ. ತಿಳಿ ನೇರಳೆ ಬಣ್ಣದ ಹೂವು ಬಿಡುವ ಗಿಡ ಕಾಣಸಿಗುವುದು ಬಹಳ ಅಪರೂಪ. ಇದು ಅಲಂಕಾರಿಕ ಕೂಡ. ಮನೆಯ ಹೊರಾಂಗಣದ ಅಂದವನ್ನು ಹೆಚ್ಚಿಸುತ್ತದೆ.

ಆಂಗ್ಲಭಾಷೆಯಲ್ಲಿ 'ಬಟರ್ ಫ್ಲೈಪಿಯೆ' ಎಂದು ಕರೆಯುವ ಶಂಖಪುಷ್ಪ ಕ್ಲಟೋರಿಯ ಟರ್ನೆಟೆಯ ಎಂಬ ಸಸ್ಯಶಾಸ್ತ್ರೀಯ ಹೆಸರಿನಿಂದ ಕರೆಯಲ್ಪಡುತ್ತಿದೆ. ನೀಲ ಬಣ್ಣಕ್ಕಿಂತಲೂ ಬಿಳಿ ವರ್ಣದ ಹೂವು ಹೆಚ್ಚು ಆರೋಗ್ಯಕರ ಎನ್ನುತ್ತಾರೆ ತಜ್ಞರು. ಇದು ಹೊಟ್ಟೆ ಸೆಳೆತ, ಜೀರ್ಣಾಂಗ ತೊಂದರೆ, ಪಿತ್ತಜನಕಾಂಗ, ಮೂತ್ರಪಿಂಡ, ಅನ್ನನಾಳದ ತೊಂದರೆ, ಹೊಟ್ಟೆ ಉಬ್ಬರದ ಸಮಸ್ಯೆಗಳನ್ನು ನಿವಾರಿಸುತ್ತದೆ.

ಈ ಬಳ್ಳಿಯ ಬೇರು, ಎಲೆ, ಕಾಂಡ, ಹೂವು ಎಲ್ಲವೂ ಔಷಧೀಯ ಗುಣಗಳ ಕಣಜ. ಅರೆ ತಲೆನೋವು ನಿವಾರಣೆಗೆ ಇದರ ಬೇರು ಉಪಯುಕ್ತ. ಬೇರನ್ನು ತೇದು ಕಣ್ಣಿನ ಮೇಲ್ಭಾಗಕ್ಕೆ ಹಚ್ಚಿಕೊಳ್ಳಬೇಕು. ಎಲೆಗಳ ರಸವನ್ನು ಬಿಸಿ ಮಾಡಿ ಲೇಪಿಸಿದರೆ ಬಾವು ನೋವು ಕಡಿಮೆಯಾಗುತ್ತದೆ. ಬೇರಿನ ರಸವನ್ನು ಹಾಲಿನಲ್ಲಿ ಬೆರೆಸಿ ಶ್ವಾಸನಾಳದ ಸಮಸ್ಯೆಗೆ ಬಳಸಬಹುದು ಎಂಬುದು ಆಯುರ್ವೇದ ತಜ್ಞರು ಕೊಡುವ ಸಲಹೆ.

ಬೀಜವನ್ನು ಹುರಿದು ಹುಡಿ ಮಾಡಿ ಬೆಂಕಿ ಗುಳ್ಳೆಗಳ ನೋವು ಶಮನಕ್ಕೆ ಬಳಸಬಹುದು. ಹೂವಿನಿಂದ ಉನ್ಮಾದ, ಅಪಸ್ಮಾರ ನಿವಾರಣೆಯಾಗುತ್ತದೆ. ಹೀಗೆ ಒಂದಲ್ಲ.. ಹತ್ತಾರು ರೋಗ ನಿವಾರಕ ಗುಣವನ್ನು ಹೊಂದಿರುವ ಶಂಖಪುಷ್ಪ ವಿಶಿಷ್ಟ ಸಸ್ಯಸಂಜೀವಿನಿಯೇ ಆಗಿದೆ. ■